ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2288
2. ಸದಸ್ಯರ ಹೆಸರು : ಡಾ|| ಆರತಿ ಕೃಷ್ಣ(ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 26-03-2026
4. ಉತ್ತರಿಸುವವರು : ಉಪ ಮುಖ್ಯಮಂತ್ರಿಗಳು

* * * * *

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರಿನ ಸಾರ್ವಜನಿಕ ಉದ್ಯಾನವನಗಳು ವಿಶೇಷವಾಗಿ ಬಿಬಿಎಂಪಿ (BBMP)/GBA ವ್ಯಾಪ್ತಿಯಲ್ಲಿನ ಉದ್ಯಾನವನಗಳು ಹಾಗೂ ವ್ಯಾಯಮ ಪರಿಕರಗಳ ನಿರ್ವಹಣೆಗೆ ಪ್ರತಿವರ್ಷ ವಿನಿಯೋಗಿಸುತ್ತಿರುವ ಮೊತ್ತವೆಷ್ಟು; ಅದರಲ್ಲಿ ಪದ್ಮನಾಭನಗರ ವ್ಯಾಪ್ತಿಯ ಆರ್.ಕೆ.ಪಾರ್ಕ್‌ಗೆ 2025-26ನೇ ಸಾಲಿನಲ್ಲಿ ನಿರ್ವಹಣೆಗಾಗಿ ಮೀಸಲಿರಿಸಿ ವ್ಯಯಿಸಿರುವ ಮೊತ್ತವೆಷ್ಟು; ಹಾಗೇ ಮೀಸಲಿರಿಸಿದ್ದಲ್ಲಿ ನಿರ್ವಹಣೆ ಮಾಡದಿರುವುದಕ್ಕೆ ಕಾರಣಗಳೇನು; | • GBA ವ್ಯಾಪ್ತಿಯಲ್ಲಿನ ಉದ್ಯಾನವನಗಳ ನಿರ್ವಹಣೆಗೆ ಮತ್ತು ಉದ್ಯಾನವನದೊಳಗಿನ ವ್ಯಾಯಮ ಪರಿಕರ ಮತ್ತು ಇತರ ಸಿವಿಲ್ ಕಾಮಗಾರಿಗಳಿಗೆ ವಿನಿಯೋಗಿಸುತ್ತಿರುವ ಅನುದಾನ ರೂ.80.00 ಕೋಟಿಗಳು.<br>• ಪದ್ಮನಾಭನಗರ ವ್ಯಾಪ್ತಿಯ ಆರ್.ಕೆ ಉದ್ಯಾನವನದ ನಿರ್ವಹಣೆಗ ಸಂಬಂಧಿಸಿದಂತೆ 2025-26ನೇ ಸಾಲಿನಲ್ಲಿ ರೂ.6.37 ಲಕ್ಷಗಳನ್ನು ಮೀಸಲಿರಿಸಲಾಗಿದ್ದು, ಸದರಿ ಅನುದಾನವನ್ನು ಬಳಕೆ ಮಾಡಿಕೊಂಡು ಉದ್ಯಾನವನವನ್ನು ನಿರ್ವಹಣೆ ಮಾಡಲಾಗುತ್ತಿದೆ. |
| ಆ | ಬಿಬಿಎಂಪಿ (BBMP)/GBA ವ್ಯಾಪ್ತಿಯ ಹೆಚ್ಚಿನ ಉದ್ಯಾನವನಗಳಲ್ಲಿ ಕಸದ ವಿಲೇವಾರಿ ಸಮರ್ಪಕವಾಗಿಲ್ಲದಿರುವುದು ಸ್ವಚ್ಛತೆಯ ಕಳಪೆ ನಿರ್ವಹಣೆಯ ಅಶುಚಿತ್ವ ಮತ್ತು ಹಾನಿಗೊಳಗಾಗಿ ದುಸ್ಥಿತಿಯನ್ನು ತಲುಪುತ್ತಿರುವುದಕ್ಕೆ ಕಾರಣಗಳೇನು; ಈ ಉದ್ಯಾನವನಗಳ ನಿರ್ವಹಣೆ ಪಡೆದ ಗುತ್ತಿಗೆದಾರರು ಅಸಮರ್ಪಕ ನಿರ್ವಹಣೆಗೆ ತೆಗೆದುಕೊಂಡ/ತೆಗೆದುಕೊಳ್ಳುತ್ತಿರುವ ಕ್ರಮಗಳೇನು; ಹಾಗೆ ಗುರುತಿಸಲ್ಪಟ್ಟ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಪ್ರಾಧಿಕಾರ ಕ್ರಮ ಕೈಗೊಳ್ಳಲಿದೆಯೇ? | • GBA ವ್ಯಾಪ್ತಿಯ ಎಲ್ಲಾ ಉದ್ಯಾನವನಗಳಲ್ಲಿ ಕಸದ ವಿಲೇವಾರಿ ಸಮರ್ಪಕವಾಗಿ ಕೈಗೊಳ್ಳಲಾಗುತ್ತಿದ್ದು, ಉದ್ಯಾನವನಗಳ ನಿರ್ವಹಣೆ ಕಾರ್ಯವನ್ನು ಮಾಡಲಾಗುತ್ತಿದೆ.<br>• ಉದ್ಯಾನವನಗಳ ನಿರ್ವಹಣೆ ಮಾಡದೇ ಇರುವ ಗುತ್ತಿಗೆದಾರರಿಗೆ ನೋಟಿಸ್‌ಗಳನ್ನು ನೀಡಲಾಗಿದ್ದು, ಸಮರ್ಪಕವಾಗಿ ನಿರ್ವಹಣೆ ಮಾಡಲು ಸೂಚಿಸಲಾಗಿರುತ್ತದೆ.<br>• ಪದೇ ಪದೇ ಸರಿಯಾಗಿ ನಿರ್ವಹಣೆ ಮಾಡದೇ ಇರುವಂತಹ ಗುತ್ತಿಗೆದಾರರಿಗೆ ನೋಟಿಸ್‌ಗಳನ್ನು ನೀಡಿ ಸರಿಯಾಗಿ ನಿರ್ವಹಣೆ ಮಾಡದೇ ಇರುವುದು ಕಂಡುಬಂದಲ್ಲಿ ಅಂತಹ ಗುತ್ತಿಗೆದಾರರುಗಳನ್ನು ಕಪ್ಪು ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

**ಕಡತ ಸಂಖ್ಯೆ: ನಅಇ 53 ಬಿಬಿಎ 2026**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ